

ಮನೆಯಲ್ಲಿ ಹಿಟ್ಟು ಬೀಸಿಗೊಳ್ಳುತ್ತಿದ್ದುದು ವಾಡಿಕೆ. ಬೇಸಿಗೆಯ ರಜೆಯಲ್ಲಿ ಒಮ್ಮೆ ಮನೆಯ ಮಂದಿಯನ್ನು ಒಪ್ಪಿಸಿ ನಾಕು ದಿನ ತಮ್ಮ ಕಾಡಿನ ವಾಸ್ತವ್ಯಕ್ಕೆ ನನ್ನನ್ನು ಕರೆದೊಯ್ದರು, ವಿಪರೀತ ಪುಸಲಾಯಿಸಿ. ಹೊತ್ತುಗಳೆಯಲು ಯಾವುದಕ್ಕೂ ಇರಲೆಂದು ಕೈಯಲ್ಲಿ ಒಂದು ಕಾದಂಬರಿ ಹಿಡಿದುಕೊಂಡು, ಶಿವನ ಕೊರಳಿನ ಹಾವಿನಂತೆ ಟವೆಲೊಂದನ್ನು ಕುತ್ತಿಗೆಗೆ ಹಾಕಿಕೊಂಡು ಉಟ್ಟ ಬಟ್ಟೆಯ ಮೇಲೆಯೇ ಹೊರಟು ನಿಂತಿದ್ದೆ. ಚಿಕ್ಕ ಮಕ್ಕಳಾದ ನಮ್ಮನ್ನು ಅವರು ಅಚ್ಚೆಯಿಂದ 'ಮುದುಕಾ, ಮುದುಕೀ' ಎಂದೇ ಸಂಬೋಧಿಸುವುದು ಹೊಸದೇನಲ್ಲ ನಮಗೆ!

ಅವರ ದಿನಚರಿ ನೋಡಿದರೆ ಬೆಕ್ಕಸ ಬೆರಗಾಗಬೇಕು. ನಿಜವಾಗಿಯೂ ಕಗ್ಗ ಕಾಡು ಜನರೇ ಸೈ. ಅಷ್ಟು ದೂರದಲ್ಲಿರುವಾಗಲೇ ಬಯಲಲ್ಲಿ ಹೂಡಿದ್ದ ಕಲ್ಲು ಒಲೆಗಳಿಂದ ಎದ್ದ ಹೊಗೆ ಸುಳಿಗಾಳಿಗೆ ಮಿಣಿಹಗ್ಗದಂತೆ ಹೊಸೆಯುತ್ತ ಆಕಾಶಕ್ಕೆ ಏರುತ್ತಿತ್ತು. ದಷ್ಟಪುಷ್ಟ ನಾಯಿಗಳು ದೂರದಿಂದಲೇ ನಮ್ಮ ಬರುವಿಕೆಯ ವಾಸನೆ ಹಿಡಿದಂತೆ ಓಡಿ ಬಂದು 'ಈಗ ಬಂದಿರಾ?' ಎನ್ನುವಂತೆ ನಮ್ಮನ್ನು ಕೂಡಿಕೊಂಡವು. ಅವುಗಳಲ್ಲಿಯೇ ಒಂದು ನನ್ನ ಮುಂಗೈ ನೆಕ್ಕುವ ಮೂಲಕ ಹಾಜರಾತಿ ತೆಗೆದು ಕೊಂಡಿತ್ತು.

ಅವರ ಆಡು ಭಾಷೆಯಲ್ಲಿ ಕುರಿ ಎಂದರೇನೇ 'ಬದುಕು' ಕುರಿಗಳ ಸಂಖ್ಯೆಯನ್ನು ಲೆಕ್ಕ ಹಾಕಿ ಹೇಳುವಾಗಲೂ ಅವರು ತಮ್ಮಲ್ಲಿ 'ಅಷ್ಟು ಬದುಕು ಇವೆ, ಇಷ್ಟು ಬದುಕು ಇವೆ' ಎಂದೇ ಹೇಳುತ್ತಾರೆ. ಅದು ಅವರ ಮೂಲಭೂತ ಬದುಕಿನ ಶೈಲಿ. ಅಂದ ಹಾಗೆ 'ಕುರಿ ತರುಬವುದು' ಎಂದರೆ ಹೊಲದೊಡೆಯರು ಕಾಳುಕಡಿ ನೀಡಿ ಹದಿನೈದು - ಇಪ್ಪತ್ತು ದಿನಗಳ ತನಕ ಮುದ್ದಾಂ